



ಪತ್ನಿಯೊಂದಿಗೆ ದೇಸರಾಜ ಅರಸು

ಹೈದರಾಲಿ ಮತ್ತು ಟಿಪ್ಪು ಸುಲ್ತಾನರ ಆಕ್ರಮಣಕಾರಿ ಆಡಳಿತವನ್ನು ಕೊನೆಗಾಣಿಸಿ ರಾಜ್ಯಾಡಳಿತವನ್ನು ಮೈಸೂರು ಅರಸರಿಗೆ ಒಪ್ಪಿಸುವುದು ಬ್ರಿಟಿಷರ ಜವಾಬ್ದಾರಿ. ಇದಕ್ಕಾಗಿ ವೆಚ್ಚವಾಗುವ 10 ಲಕ್ಷ ವರಹಗಳನ್ನು ಬ್ರಿಟಿಷರಿಗೆ ಲಕ್ಷ್ಮಮ್ಮಣ್ಣಿ ನೀಡಬೇಕು ಎಂಬುದು ಕರಾರು. ಅದರಂತೆ 1799ರಲ್ಲಿ ನಡೆದ ನಾಲ್ಕನೇ ಮೈಸೂರು ಯುದ್ಧದಲ್ಲಿ ಟಿಪ್ಪುವಿನ ಅಂತ್ಯವಾಯಿತು. ರಾಜಮಾತೆ ಲಕ್ಷ್ಮಮ್ಮಣ್ಣಿ ಅವರ ಆಸೆ ಕೊನೆಗೂ ಕೈಗೂಡಿತು. ಮೈಸೂರು ರಾಜ್ಯ ಮತ್ತೆ ಯದುವಂಶದ ಮಡಿಲಿಗೆ ಬಿತ್ತು.

ಅರಸು ಮನೆತನಕ್ಕೆ ಮೈಸೂರು ರಾಜ್ಯವನ್ನು ಹಿಂದಿರುಗಿಸುವ, ಅಧಿಕಾರ ಹಸ್ತಾಂತರಿಸುವ ಸಂಧಿಪತ್ರಕ್ಕೆ ಅರಮನೆಯ ಪರವಾಗಿ ಸಹಿ ಹಾಕಿದ್ದು ರಾಜಮಾತೆ ಲಕ್ಷ್ಮಮ್ಮಣ್ಣಿ. ತಮ್ಮ ಆಸೆಯನ್ನು ಈಡೇರಿಸಿಕೊಂಡ ಅವರು ಐದು ವರ್ಷದ ಬಾಲಕ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ ಪಟ್ಟಾಭಿಷೇಕ ಮಾಡಿದರು. ರಾಜಮಾತೆ ಲಕ್ಷ್ಮಮ್ಮಣ್ಣಿ ಅವರು ಇಷ್ಟೆಲ್ಲಾ ಹೋರಾಟ ನಡೆಸುತ್ತಿದ್ದಾಗ ಕಿರಿಯ ರಾಣಿ ದೇವಾಜಮ್ಮಣ್ಣಿ ಅವರು ರಾಜಮಾತೆಯ ಬೆನ್ನಿಗೆ ನಿಂತಿದ್ದರು.

ಬ್ರಿಟಿಷರು ನೀಡಿದ ವಾಗ್ದಾನದಂತೆ ಮೈಸೂರು ಅರಸರಿಗೆ ಅಧಿಕಾರವನ್ನೇನೋ ನೀಡಿದರು. ಆದರೆ 1831ರಲ್ಲಿ ಮತ್ತೆ ಅಧಿಕಾರವನ್ನು ವಾಪಸು ಪಡೆದರು. ಬ್ರಿಟಿಷರೇ ನೇರವಾಗಿ ಆಡಳಿತ ನಡೆಸಲು ಆರಂಭಿಸಿದರು. ಇದು 1867ರವರೆಗೂ ಮುಂದುವರಿಯಿತು. 1867ರಲ್ಲಿ ಅಧಿಕಾರವನ್ನು ಮತ್ತೆ ಮೈಸೂರು ಅರಸರಿಗೇ ಬಿಟ್ಟುಕೊಡಲು ಬ್ರಿಟಿಷರು ನಿರ್ಧರಿಸಿದರು. ಆಗ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರಿಗೆ 74 ವರ್ಷ. 1868ರಲ್ಲಿ ಅವರು ನಿಧನರಾದರು. ಅಧಿಕಾರ ಬ್ರಿಟಿಷರ ಕೈಯಲ್ಲಿಯೇ ಉಳಿಯಿತು. 1881ರಲ್ಲಿ ಮುಮ್ಮಡಿ ಕೃಷ್ಣರಾಜ ಒಡೆಯರ್ ಅವರ ದತ್ತು ಪುತ್ರ ಹತ್ತನೇ ಚಾಮರಾಜೇಂದ್ರ ಒಡೆಯರ್ ಅವರು ಪಟ್ಟಕ್ಕೆ ಬಂದಾಗ ಅವರಿಗೆ ಅಧಿಕಾರ ನೀಡಲಾಯಿತು. ಅವರು ಸುಮಾರು 14 ವರ್ಷ ಆಡಳಿತ ನಡೆಸಿ, 1894ರಲ್ಲಿ ಗಂಟಲು ಬೇನೆಯಿಂದ ನಿಧನರಾದರು. ಅತ್ಯಂತ ದಕ್ಷ ಆಡಳಿತಗಾರರಾಗಿದ್ದ ಚಾಮರಾಜ ಒಡೆಯರ್ ಅವರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿದ್ದರು. ಅವರು ನಿಧನರಾದಾಗ ಅವರ ಪುತ್ರ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ ಇನ್ನೂ 10 ವರ್ಷದ ಪ್ರಾಯ. ಆಗ ಮತ್ತೆ ಮೈಸೂರು ರಾಜ್ಯದ ಅಧಿಕಾರ ರಾಜಮಾತೆ


ॐ ✝ ☪ ಸರ್ವೇಜನಃ ಸುಖಿನೋ ಭವಂತುಃ ॐ ✝ ☪
ಸಮಸ್ಯೆ ನಿಮ್ಮದು ಪರಿಹಾರ ನಮ್ಮದು
ಶ್ರೀ ಸಾಯಿಬಾಬ ಉಪಾಸಕರು
ದಕ್ಷಿಣ ಭಾರತದಾದ್ಯಂತ ಜನಮನ್ನಣೆ ಪಡೆದಿರುವ ವಂಶಪಾರಂಪರಿಕ
ವಶೀಕರಣ ಮಾಂತ್ರಿಕರು
ಶ್ರೀಯುತ ಪರಶುರಾಮ್ ಗುರೂಜಿ
ಸ್ತ್ರೀ ಪುರುಷ ವಶೀಕರಣ, ಸತಿಪತಿ ಕಲಹ, ಡೈವೋರ್ಸ್ ಪ್ರಾಬ್ಲಮ್, ಸಾಲಬಾಧೆ, ಪ್ರೇಮವಿಚಾರ, ಸಂತಾನಫಲ, ವ್ಯಾಪಾರಾಭಿವೃದ್ಧಿ, ಜಮೀನು ವಿಚಾರ, ಕೋರ್ಟ್‌ಕೇಸ್, ಮಾಟಮಂತ್ರ, ಪ್ರೇತಬಾಧೆ ಇನ್ನಿತರ ನಿಮ್ಮ ಸಮಸ್ಯೆ ಏನೇ ಇರಲಿ ಎಷ್ಟೇ ಕಠಿಣವಾಗಿರಲಿ
ಕೇರಳ ಮತ್ತು ಕೊಳ್ಳೇಗಾಲದ 16ನೇ ಶತಮಾನದ ಪ್ರಾಚೀನ ತಾಳೆಗ್ರಂಥದ ರಹಸ್ಯವಾದ ಮಹಾರುದ್ರಶೂಲ ಪ್ರಣವಶಕ್ತಿಯಿಂದ
ಕೇವಲ 5 ದಿನದಲ್ಲಿ 100% ಪರಿಹಾರ ಶತಸಿದ್ಧ
ನೀವು ಎಷ್ಟೋ ದೈವ, ದೇವಸ್ಥಾನ ಮತ್ತು ಜ್ಯೋತಿಷ್ಯರಲ್ಲಿ ಕೇಳಿ ಪರಿಹಾರ ಸಿಗದೆ ನೊಂದಿದ್ದರೆ ಶೀಘ್ರ ಪರಿಹಾರಕ್ಕಾಗಿ ಇವರನ್ನೊಮ್ಮೆ ಭೇಟಿಮಾಡಿ.
ಇಲ್ಲಿ ಹೇಳುವ ವಿಷಯವನ್ನು ಗುಪ್ತವಾಗಿಡಲಾಗುವುದು ಹಾಗೂ ಗುರೂಜಿಯವರಲ್ಲಿ ನಿಸ್ಸಂಕೋಚದಿಂದ ಮಾತನಾಡಲು ಕರೆಮಾಡಿ:
9620444460
ಖಾಯಂ ಮನೆ ವಿಳಾಸ:
ಜೈಬಾಲಾಜಿ ಜ್ಯೋತಿಷ್ಯಂ
ಬನಶಂಕರಿ ದೇವಸ್ಥಾನದ ಹತ್ತಿರ, ಮುಖ್ಯಬಸ್‌ನಿಲ್ದಾಣದ ಪಕ್ಕದಲ್ಲಿ, ಬನಶಂಕರಿ ಬೆಂಗಳೂರು.
ವಿಶೇಷ ಸೂಚನೆ: ಈ ಪೇಪರ್ ಕಟ್ಟಿಂಗ್ ತಂದವರಿಗೆ ಮುಜರಾಯಿ ಇಲಾಖೆ ಮತ್ತು ಧಾರ್ಮಿಕ ದತ್ತಿ ಇಲಾಖೆ ಹಾಗೂ ಮಾಡಾಯಿಕಾವ್ ಭಗವತಿ ದೇವಸ್ಥಾನಂ (ತಳಿಪರಂ) ಕೇರಳ ವತಿಯಿಂದ ಉಚಿತ ಸೇವೆಗಳು ಮತ್ತು ಪರಿಹಾರಗಳು ಲಭ್ಯವಿದೆ.